ಸರ್ಕಾರಕ್ಕೆ ಬಂದಿದೆ. ಈ ಕಡತವನ್ನು ಅತಿ ಶೀಘ್ರದಲ್ಲಿಯೇ ವಿಲೇವಾರಿ ಮಾಡಿ ಪೌರ ಕಾರ್ಮಿಕರ ಸಮಸ್ಯೆ ಏನು ಇದೆ ಅದನ್ನು ನಿವಾರಣೆ ಮಾಡುತ್ತೇವೆ. ನಮ್ಮ ನಿರ್ದೇಶನಾಲಯದಲ್ಲಿ ಕಳೆದ ಒಂದು ವರ್ಷದಿಂದ ಕಾಗದ ಪತ್ರಗಳ ವಿಲೇವಾರಿಯಾಗುತ್ತಿಲ್ಲ ಎಂದು ಅನೇಕ ಜನ ಶಾಸಕರು ಹೇಳಿದ್ದಾರೆ. ಇನ್ನು ಮುಂದೆ ಆ ರೀತಿ ಆಗದ ಹಾಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನಮ್ಮ ನಿರ್ದೇಶನಾಲಯದಲ್ಲಿ ಯಾವುದೇ ಕಾರಣಕ್ಕೆ ಕಾಗದಪತ್ರಗಳ ವಿಲೇವಾರಿಯಲ್ಲಿ ತಡ ಆಡಬಾರದೆಂದು ನಾನು ಸೂಕ್ತ ಆದೇಶ ನೀಡುತ್ತೇನೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಉಡುಪಿ ನಗರಸಭೆಯಿಂದ ಸುಮಾರು 10 ಪ್ರಸ್ತಾವನೆಗಳು ಕಳೆದ ಒಂದು ವರ್ಷದಿಂದ ಬಾಕಿ ಇವೆ. ಅವುಗಳನ್ನು ಯಾವಾಗ ಪರಿಶೀಲನೆ ಮಾಡಿ ಕಳುಹಿಸುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಪೌರ ಕಾರ್ಮಿಕರ ಸಮಸ್ಯೆ ಇಡೀ ರಾಜ್ಯದಲ್ಲಿದೆ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ ನಾವು ಪೌರ ಕಾರ್ಮಿಕರ ನೇಮಕಾತಿ ಬಗ್ಗೆ ಪರಿಶೀಲಿಸುತ್ತಿದ್ದೇವೆ ಅಂತ.

ಶ್ರೀ ಕೆ. ರಾಮದಾಸ್ : ಮೈಸೂರು ನಗರ ಸುಮಾರು 10 ಕಿಲೋ ಮೀಟರ್ ಬೆಳದಿದ್ದರೂ ಹಿಂದೆ ಎಷ್ಟು ಜನ ಪೌರಕಾರ್ಮಿಕರು ಇದ್ದರೋ ಅಷ್ಟೇ ಜನ ಪೌರಕಾರ್ಮಿಕರು ಈಗಲೂ ಇದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ನಾಗಪ್ಪ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಅಭಿಪ್ರಾಯ ತಿಳಿದುಕೊಂಡು ಪೌರಕಾರ್ಮಿಕರ ಸಮಸ್ಯೆ ಏನು ಇದೆ ಅದನ್ನು ಆದಷ್ಟು ಬೇಗ ಬಗೆಹರಿಸಿಕೊಡುತ್ತೇನೆ.

ಶ್ರೀ ಎ.ಆರ್. ಕೃಷ್ಣ ಮೂರ್ತಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ತರಹ ಉತ್ತರ ಹೇಳಿದರೆ ಸರಿಯಾಗುವುದಿಲ್ಲ. 1962ನೇ ಇಸವಿಯಲ್ಲಿ ಇದ್ದಂತಹ ಪೌರ ಕಾರ್ಮಿಕರು ಈಗಲೂ ಇದ್ದಾರೆ. ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಪಟ್ಟಣಗಳು, ಬಡಾವಣೆಗಳು ಜಾಸ್ತಿಯಾಗಿವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಬಗೆಹರಿಸುತ್ತೇವೆಂದು ಹೇಳಿದ್ದಾರೆ, ಒಂದು ತಿಂಗಳು ಸಮಯ ಕೊಡಿ. ಅವರು ಬಗೆಹರಿಸದಿದ್ದರೆ ಆಮೇಲೆ ಕೇಳಿ.

ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ನೆರವು

96 (1190) ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಸಾಲ ಹಾಗೂ ನೆರವಿನ ಯೋಜನೆಯ ಕಾಮಗಾರಿಯ ಅನುಷ್ಠಾನ ಯಾವ ಹಂತದಲ್ಲಿದೆ; ಯಾವಾಗ ಆರಂಭ ಮಾಡಲಾಗುವುದು;

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಇದರ ಪ್ರಗತಿಯ ವಿವರ ಒದಗಿಸುವುದು;

ಇ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಈ ಯೋಜನೆಯ ಬಗ್ಗೆ ಯಾವ ಕಾರ್ಯಕ್ರಮ ಕೈಗೊಳ್ಳಲಾಗಿದೆ? ಎಂದು ಪ್ರಾರಂಭಿಸಲಾಗುವುದು? ಯಾವ ಅಭಿವೃದ್ಧಿ ಕಾಮಗಾರಿಗೆ ಎಷ್ಟು ಅನುದಾನ ಇಡಲಾಗಿದೆ (ವಿವರ ಒದಗಿಸುವುದು)

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಪ್ರಸ್ತುತ ವಿವರವಾದ ಡಿಸೈನ್ ಮತ್ತು ಯೋಜನಾ ವೆಚ್ಚಗಳನ್ನು ಯೋಜನಾ ಕಾರ್ಯ ನಿರ್ವಹಣಾ ಸಮಾಲೋಚಕರು (Project Management Consultants) ಮತ್ತು ಡಿಸೈನ್ ಮತ್ತು ಮೇಲ್ವಿಚಾರಣಾ ಸಮಾಲೋಚಕರು (Design and Spervision Consultants) ತಯಾರಿಸುತ್ತಿದ್ದು, ಟೆಂಡರುಗಳನ್ನು ಕರೆದು, ಗುತ್ತಿಗೆದ್ದಾರ ಪೂರ್ವಾರ್ಹತೆಯ ಮೇಲೆ ಕಾಮಗಾರಿಗಳನ್ನು ಪ್ರಾರಂಭಿಸಲು ಗುತ್ತಿಗೆದಾರರಿಗೆ ವಹಿಸಲಾಗುವುದು.

ಆ) ಮೇಲಿನಂತೆ

ಇ) ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿಯಲ್ಲಿ ಮಂಗಳೂರು ನಗರವನ್ನು ಅಭಿವೃದ್ಧಿಗೊಳಿಸಲು ಈ ಯೋಜನೆಗಳನ್ನು ಆಯ್ದುಕೊಳ್ಳಲಾಗಿದೆ. ನೀರು ಸರಬರಾಜು ವ್ಯವಸ್ಥೆಯ ಸುಧಾರಣೆ, ಒಳಚರಂಡಿ ವ್ಯವಸ್ಥೆಯ ಸುಧಾರಣೆ, ಕಸಕಡ್ಡಿಗಳ ವಿಲೇ ವಾರಿ, ಚರಂಡಿಗಳ ಅಭಿವೃದ್ಧಿ, ನಗರ ಸಾರಿಗೆ ಮೂಲ ಸೌಕರ್ಯ ವ್ಯವಸ್ಥೆ, ನಗರ ಸಾರಿಗೆ ಮೂಲ ಸೌಕರ್ಯ ವ್ಯವಸ್ಥೆ, ನಗರ ಸಭೆಯ ಸೌಲಭ್ಯಗಳು, ಬಡತನ ನಿರ್ಮೂಲನಾ ಮತ್ತು ವಸತಿ ಸೌಕರ್ಯ.

ಈ ಮೇಲೆ ತಿಳಿಸುವಂತೆ ವಿವರವಾದ ಡಿಸೈನ್ ಮತ್ತು ಯೋಜನಾ ವೆಚ್ಚಗಳನ್ನು ಯೋಜನಾ ಕಾರ್ಯನಿರ್ವಹಣಾ ಸಮಾಲೋಚಕರು ಮತ್ತು ಡಿಸೈನ್ ಮತ್ತು ಮೇಲ್ವಿಚಾರಣಾ ಸಮಾಲೋಚಕರು ವಿನ್ಯಾಸದ ಅಂದಾಜು ವೆಚ್ಚವನ್ನು ತಯಾರಿಸುತ್ತಿದ್ದಾರೆ ಅವುಗಳು ಪೂರ್ಣಗೊಂಡಲ್ಲಿ ಪ್ರತಿ ಕಾಮಗಾರಿಗಳಿಗೆ ಅಂತಿಮಗಾರಿಗಿ ತೀರ್ಮಾನ ಕೈಗೊಳ್ಳಲಾಗುವುದು. ತಾತ್ಕಾಲಿಕವಾಗಿ ರೂ.285.98 ಕೋಟಿಗಳನ್ನು ಮಂಗಳೂರಿಗಾಗಿ ಕಾಯ್ದಿರಿಸಲಾಗಿದೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. 285.98 ಕೋಟಿ ರೂಪಾಯಿಗಳ ವಿಶ್ವಬ್ಯಾಂಕ್ ಸಾಲದ ನೆರವಿನ ಯೋಜನೆಯನ್ನು ಮಂಗಳೂರಿಗೆ ಮಂಜೂರು ಮಾಡಿರುವುದಕ್ಕಾಗಿ ವಿಶೇಷವಾಗಿ ಸರಕಾರವನ್ನು ಅಭಿನಂದಿಸುತ್ತೇನೆ. ಅದರ ಜೊತೆಗತ ಮೊದಲು ಒಳಚರಂಡಿ ವ್ಯವಸ್ಥೆಗಾರಿ 40 ಕೋಟಿ ಇದ್ದುದನ್ನು 140 ಕೋಟಿ ರೂಪಾಯಿಗಳ ಯೋಜನೆ ಎಂದು ಮಾಡಬೇಕೆಂದು ಮಂಗಳೂರು ಮಹಾನಗರ ಪಾಲಿಕೆಯವರ ಬೇಡಿಕೆಯು ಬಂದಿದೆ. ಅದಕ್ಕೆ ತಾವುಗಳು ತತ್‌ಕ್ಷಣವೇ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. 1999-2000ದ ಇಸವಿಯಲ್ಲಿ ಯೋಜನೆಯು ಆರಂಭವಾಗಬೇಕಾಗಿತ್ತು. ಆದರೆ ಅದ್ಯಾವುದೂ ಆಗದೇ ಇವ್ಹೊತ್ತಿಗೂ ಚರ್ಚೆಯ ರೂಪದಲ್ಲಿರುವುದರಿಂದ ಕಾಮಗಾರಿಯನ್ನು ಕೂಡಲೇ ಆರಂಭ ಮಾಡಬಹುದೆ? ಎಂಬ ಬಗ್ಗೆ ದಯಮಾಡಿ ಉತ್ತರ ಪಡೆಯಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಪ್ರಕಾರ ಮಂಗಳೂರು ಮಹಾನಗರ ಪಾಲಿಕೆಗೆ ಸುಮಾರು 260 ಕೋಟಿ ರೂಪಾಯಿಗಳು ಸ್ಯಾಂಕ್ಷನ್ ಆಗಿದೆ. ಇದರಲ್ಲಿ ಯುಜಿಡಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಈಗಾಗಲೇ ಅಲ್ಲಿಗೆ ಯುಜಿಡಿಗೆ ನಾವು 50-70 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ತಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡು ಬೇರೆ ಹಣದ ಸೌಲಭ್ಯವನ್ನು ಪಡೆದುಕೊಂಡು ಯುಜಿಡಿ ಕೆಲಸವನ್ನು ಮಾಡಲು ಪ್ರಾಮುಖ್ಯತೆಯನ್ನು ಕೊಡುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮಕ್ಕಾಗಿ ಸೂಚನೆ ನೀಡಿದ್ದಾರೆ. ಸುಮಾರು 3-4 ತಿಂಗಳುಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಇಲ್ಲಿ 140 ಕೋಟಿ ರೂಪಾಯಿ ಒಳಚರಂಡಿ ಯೋಜನೆಯನ್ನು ಹಾಕಿಕೊಂಡರೂ ಕೂಡ ಈಗಿರುವಂಥ ಜಿ.ಇ. ಗಳು ಇದ್ದರೂ ಕೂಡ ಅದನ್ನು ಮೆಯಿಂಟ್ಯನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಅದರ ಮ್ಯಾನೇಜ್‌ಮೆಂಟ್ ಸರಿಯಾಗಿ ನಡೆಯುವ ರೀತಿಯಲ್ಲಿ ಬೇಕಾಗುವ ಸ್ಟ್ಯಾಪ್ ಇತ್ಯಾದಿ ಸೌಲಭ್ಯಗಳನ್ನು ಕೊಡುವ ಬಗ್ಗೆ ಮತ್ತು ಅವರಿಗತ ಟ್ರೈನಿಂಗ್ ಕೊಡುವ ನಿಟ್ಟಿನಲ್ಲಿ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ? ಇಲ್ಲವಾದಲ್ಲಿ ಅಂಥ ಒಂದು ಕಾರ್ಯಕ್ರಮವನ್ನು ತಾವುಗಳು ಹಾಕಿಕೊಳ್ಳಬೇಕು. ಹಾಗೆಯೇ ಈ ಕುರಿತಾಗಿ ಚರ್ಚೆಯು ನಡತಯತಕ್ಕಂಥ ಸಂದರ್ಭಗಳಲ್ಲಿ ಮಹಾನಗರಪಾಲಿಕೆಯನ್ನಾಗಲೀ, ಸ್ಥಳೀಯ ಶಾಸಕರನ್ನಾಗಲೀ ವಿಶ್ವಾಸಕ್ಕೆ ತೆಗೆದುಕೊಳ್ಳುವಂಥ ಕೆಲಸವು ಸರಿಯಾಗಿ ಆಗುತ್ತಿಲ್ಲ. ಅದನ್ನು ಕಡ್ಡಾಯವಾಗಿ ಮಾಡುವ ಹಾಗೆ ಕ್ರಮ ತೆಗೆದುಕೊಳ್ಳುತ್ತೀರಾ? ಹಾಗೆಯೇ ಕ್ವಾಲಿಟಿ ಮೆಯಿಂಟೆನೆನ್ಸ್ ಆಗುವ ರೀತಿಯಲ್ಲಿ ತಜ್ಞರ ಸಮಿತಿಯನ್ನು ಅದರಲ್ಲಿ ತಜ್ಞರು, ಜನಪ್ರತಿನಿಧಿಗಳು, ಪತ್ರಕರ್ತರು ಇರುವಂಥ ಒಂದು ಸಮಿತಿಯನ್ನು ಮಾಡಬೇಕೆಂದು ಒತ್ತಾಯಿಸಿ ಆ ಮೂಲಕ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾದ ನಿಟ್ಟಿನಲ್ಲಿ ತಾವುಗಳು ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೇ, ನಾವು ಎಲ್ಲಾ ನಗರ ಸಭೆ ಮತ್ತು ಕಾರ್ಪೊರೇಶನ್‌ಗಳಲ್ಲಿಯು ಇಂಥ ವಿಚಾರಗಳು ಬಂದಾಗ ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆದು ಕೊಂಡು ಮಾಡುತ್ತಿದ್ದೇವೆ. ಇನ್ನು ಕ್ವಾಲಿಟಿ ಮೆಯಿಂಟೇನ್ ಬಗ್ಗೆ ಸರಕಾರದವರು ಎಲ್ಲಾ ನಿಗಾವನ್ನು ಎಚ್ಚರಿಕೆಯಿಂದ ವಹಿಸಿಕೊಂಡು ಬರುತ್ತಿದ್ದೇವೆ. ಕಳಪೆ ಕಾಮಗಾರಿಗಳು ಆಗದಂತೆ ನೋಡಿಕೊಳ್ಳುತ್ತೇವೆ ಆ ಬಗ್ಗೆ ಯಾವುದೇ ಅನುಮಾನವು ಬೇಡ ಎಂದು ತಿಳಿಸಬಯಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ತಮಗೆ ತಜ್ಞರುಗಳ ಸಮಿತಿಯನ್ನು ಮಾಡಲು ಇರುವ ಸಮಸ್ಯೆಗಳಾದರೂ ಏನು? ವಿಜಿಲೆನ್ಸ್ ಕಮಿಟಿಯನ್ನು ಮಾಡಲು ಇರುವ ತೊಂದರೆ ಏನು? ತಜ್ಞರ ಸಮಿತಿಯನ್ನು ಕಡ್ಡಾಯವಾಗಿ ರಚಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೇ, ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಸಹಕಾರದ ಕಾಮಗಾರಿಗಳನ್ನು ತುಮಕೂರು ಮುಂತಾದ ಕಡೆಗಳಲ್ಲಿ ತೆಗೆದುಕೊಂಡಿದ್ದಾರೆ. ನಮ್ಮ ಕೋಲಾರವು ಕೇವಲ 70 ಕಿ.ಮೀ ಅಂತರದಲ್ಲಿರುವ ನಗರ. ಕೋಲಾರ ಜಿಲ್ಲಾ ಕೇಂದ್ರವಾಗಿದ್ದು ಅಲ್ಲಿಗೆ ಯುಜಿಡಿ ವ್ಯವಸ್ಥೆ ಕೂಡ ಇಲ್ಲವಾಗಿದೆ. ಕೋಲಾರದಲ್ಲಿ ಯುಜಿಡಿ ಕೆಲಸವನ್ನಾದರೂ ತೆಗೆದುಕೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೇ, ಕೋಲಾರಕ್ಕೆ ಯುಜಿಡಿ ಒದಗಿಸಿಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ತಜ್ಞರ ಸಮಿತಿಯನ್ನು ಮಾಡಿ ಅಲ್ಲಿ ನಡೆಯುವ ಕಾಮಗಾರಿಗಳ ಗುಣಮಟ್ಟವನ್ನು ನಿಗಾವಹಿಸಿ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಮಾಡಬೇಕು. ಇದಕ್ಕೆ ಯಾವ ಖರ್ಚು ಕೂಡ ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೆಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ಸಾರ್ವಜನಿಕ ಕೆಲಸಕ್ಕೂ ಒಂದು ನಾಗರೀಕ ಸಮಿತಿಯನ್ನು ರಚನೆ ಮಾಡಲು ಬರುವುದಿಲ್ಲ. ಇದೊಂದು ಕಾರ್ಯಕ್ರಮ. ಇದನ್ನು ಇಂಪ್ಲಿಮೆಂಟ್ ಮಾಡಲು ಏಜನ್ಸೀಸ್ ಇವೆ. ಅವರು ನಿಯಮಗಳ ಅಡಿಯಲ್ಲಿ ಮಾಡುತ್ತಾರೆ. ಅದಕ್ಕೆ ಒಂದು ನಗರ ಸಮಿತಿಯನ್ನು ಮಾಡಿ ಆ ಪ್ರೋಗ್ರಾಮ್‌ನ್ನು ಹ್ಯಾಂಪರ್ ಮಾಡುವ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ನನ್ನ ಊರು ಅಂಕೋಲದಲ್ಲಿಯೂ ಕೂಡ ಏಡಿಬಿ ಯೋಜನೆಯಡಿಯಲ್ಲಿ ಕೆಲಸವನ್ನು ಆರಂಭ ಮಾಡಲು ಯೋಜನೆ ಎಲ್ಲಾ ಸಿದ್ಧವಾಗಿದೆ. ಸನ್ಮಾನ್ಯ ಕಾನೂನು ಸಚಿವರು ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರ ಕೊಡುವಾಗ ಕೇಳಿದ್ದನ್ನು ಅನುಸರಿಸಿ ತತ್‌ಕ್ಷಣ ಇವರೊಂದು ಉತ್ತರವನ್ನು ಕೊಟ್ಟರು. ಆದರೆ ತಮಗೆ ಅದರ ಬಗ್ಗೆ ಹೆಚ್ಚಿನ ಪೂರ್ಣವಾದ ಮಾಹಿತಿಗಳು ಗೊತ್ತಿಲ್ಲವೆಂದು ಕಾಣುತ್ತದೆ. ಈಗಾಗಲೇ ನಾಗರೀಕ ಸಮಿತಿಯನ್ನು ರಚನೆ ಮಾಡಿದೆ. ಆ ಸಮಿತಿಗೆ ಕೆಲವು ಅಧಿಕಾರಗಳನ್ನು ಕೊಡಬೇಕೆಂದು ಮಾನ್ಯ ಯೋಗೀಶ್ ಭಟ್‌ರವರು ಮತ್ತು ನಾನು ಕೇಳುತ್ತಿದ್ದೇನೆ. ಅಂಥ ಸಮಿತಿಗೆ ಕೆಲವು ಅಧಿಕಾರ ಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನಗೆ ಅದರ ಬಗ್ಗೆ ಹೆಚ್ಚಿನ ಪೂರ್ಣವಾದ ಮಾಹಿತಿಗಳು ಇಲ್ಲವೆಂದು ಹೇಳಿರುವುದು ಸರಿಯಲ್ಲ.

ಅಧ್ಯಕ್ಷರು : ಸದಸ್ಯರು ಹೇಳಿದ ಮಾಹಿತಿಗಳು ಗೊತ್ತಿಲ್ಲವೆಂದು ಕಾಣುತ್ತದೆ ಎಂಬ ಶಬ್ಧಗಳನ್ನು ಬದಲಾವಣೆ ಮಾಡಿ ಬೇರೆ ಶಬ್ಧಗಳನ್ನು ಉಪಯೋಗಿಸಲು ಸೂಚಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗಳ ಇಂಪ್ಲಿಮೆಂಟೇಷನ್‌ಗೆ ಏಜನ್ಸೀಸ್ ಇದೆಯಲ್ಲ ಅದಕ್ಕೆ ನಾಗರೀಕ ಸಮಿತಿಗಳನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ನಾನು ಅಭಿಪ್ರಾಯಪಡುತ್ತೇನೆ. ಅದು ಸಾಧ್ಯವೂ ಇಲ್ಲ.....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ನಾಗರೀಕ ಸಮಿತಿಯನ್ನು ರಚನೆ ಮಾಡತಕ್ಕಂಥಾದ್ದು ಒಂದು ಭಾಗ. ಎರಡನೆಯದಾಗಿ ಏಡಿಬಿ ಇಂದ 12 ಪರ್‌ಸೆಂಟ್‌ಗೆ ಸಾಲವನ್ನು ತೆಗೆದುಕೊಂಡು ಅಭಿವೃದ್ಧಿ ಯೋಜನೆಗಳನ್ನು ಮಾಡುತ್ತಾ ಇದ್ದಾರೆ. ಇದನ್ನು ಪುನರ್ ಪಾವತಿ ಮಾಡಬೇಕಾದ ಜವಾಬ್ದಾರಿಯು ಯಾರದ್ದು? ಇದನ್ನು ದಯಮಾಡಿ ತಿಳಿಸಿ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಏಡಿಬಿ ಯೋಜನೆಯಡಿಯಲ್ಲಿ ಕಳಪೆ ಕಾಮಗಾರಿಗಳು ಆಗಿವೆ ಎಂಬ ವಿಚಾರ ಬಂದಾಗ ತಾವುಗಳು ಚರ್ಚೆಗೆ ಅನುವು ಮಾಡಿಕೊಟ್ಟಿದ್ದರಿಂದ ಕಳೆದ ನದನದಲ್ಲಿ ಚರ್ಚೆ ಆಯಿತು. ಆ ಸಂದರ್ಭದಲ್ಲಿ ಹಿಂದೆ ಇದ್ದಂಥ ಮಂತ್ರಿಗಳು ಒಂದು ವಿಚಾರವನ್ನು ಸದನದ ಮುಂದೆ ಇಟ್ಟರು. ಏಡಿಬಿ ಯವರು ಕೋಟ್ಯಾಂತರ ರೂಪಾಯಿಗಳನ್ನು ಸಾಲ ಕೊಡುವಂಥ ಸಂದರ್ಭದಲಿಲ ಸುಮಾರು 7 ಪರ್‌ಸೆಂಟ್‌ನ್ನು ನಾವು ಬೇರೆ ಬೇರೆಯವರಿಗೆ ಕನ್‌ಸಲ್ಟೇಶನ್ ಫೀಸ್ ಎಂದು ಕೊಡುತ್ತಾ ಇದ್ದೇವೆ, ಮೈಸೂರು ನಗರಕ್ಕೆ 140 ಕೋಟಿ ರೂಪಾಯಿಗಳ ಯೋಜನೆ 15 ಕೋಟಿ ರೂಪಾಯಿಗಳ ಕನ್‌ಸಲ್ಟೇಶನ್ ಫೀಸ್‌ನ್ನು ಕೊಡುತ್ತಾ ಇದ್ದೇವೆ. ಆದರೂ ಕೂಡ ಕಾಮಗಾರಿಯು ಕಳಪೆಯಾಗಿದೆ ಎಂದು ಮಾನ್ಯ ಸಚಿವರೇ ಬಂದು ನೋಡಿದಾಗ ಅವರಿಗೂ ಕೂಡ ಅದು ಕಳಪೆ ಕಾಮಗಾರಿಯಾಗಿದೆ ಎಂದು ಅವರಿಗೂ ಗೊತ್ತಾಯಿತು. ಎಲ್ಲವೂ ಗೊತ್ತಾದ ಮೇಲೆ ಸರಕಾರದವರು ಅವರಿಗೆ ನೋಟೀಸ್ ಸರ್ವ್ ಮಾಡಿ ಟೆಂಡರ್‌ದಾರರನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿತ್ತು. ಹೀಗೆ ಕನ್‌ಸಲ್ಟೆಂಟ್ಸ್ ಎಲ್ಲೋ ಕುಳಿತುಕೊಂಡು ಕೋಟ್ಯಾಂತರ ರೂಪಾಯಿಗಳ ಕಮಿಶನ್‌ಅನ್ನು ತೆಗೆದುಕೊಳ್ಳುತ್ತಿದ್ದಾರೆ. ಅದು ತಪ್ಪಬೇಕು. ಅದರ ಜೊತೆಯಲ್ಲಿ ನಾಗರೀಕರ ಸಮಿತಿಯು ಇದ್ದಾಗ ಅದಕ್ಕೆ ಜವಾಬ್ದಾರಿಯುತವಾದ ಹೊಣೆ ಇರುವುದರಿಂದ ಹಣದ ಸರಿಯಾದ ಉಪಯೋಗವಾಗುತ್ತದೆ. ಆದ್ದರಿಂದ ಸಮಿತಿಯನ್ನು ರಚಿಸಲು ಅವಕಾಶವನ್ನು ಮಾಡಿಕೊಡಬೇಕು. ಮೈಸಏಟು ನಗರದಲ್ಲಿ ಅಂಥ ಒಂದು ಸಮಿತಿಯ ಮೂಲಕ ಒಳ್ಳೆಯ ಕೆಲಸವಾಗುತ್ತಾ ಇದೆ.

ಅಧ್ಯಕ್ಷರು : ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ. ಈ ಸಂದರ್ಭದಲ್ಲಿ ನೀವು ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸುವುದು ಬೇಡ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಾಗ ವಿವರವಾಗಿ ಮಾತನಾಡಿ. ಪ್ರಶ್ನೋತ್ತರ ವೇಳೆಯಲ್ಲಿ ಹೀಗೆ ವಿವರವಾಗಿ ಮಾತನಾಡಬಾರದು.

ಶ್ರೀ ಎ. ರಾಮದಾಸ್ : ಸಮಿತಿಯನ್ನು ರಚನೆ ಮಾಡಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ಕೊಡುವ ಕೆಲಸವನ್ನು ಮಾಡಿ. ಅಲ್ಲಿ ತಪ್ಪು ನಡೆದಾಗ ಸಮಿತಿಯು ವರದಿಯನ್ನು ಕೊಟ್ಟಾಗ ಸರಕಾರದವರು ಪರಿಶೀಲಿಸಲು ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ಸಮಿತಿಗಳನ್ನು ರಚನೆ ಮಾಡಲು ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪಿಸಿದಂತೆ ಅಲ್ಲಿಯ ಕಾಮಗಾರಿಗೆ ಏಡಿಬಿ ಯವರು 735 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದ್ದಾರೆ. ಕರ್ನಾಟಕ ಸರಕಾರದಿಂದ ಸುಮಾರು 320 ಕೋಟಿ ರೂಪಾಯಿಗಳ ಹಣವನ್ನು ಕೊಡುತ್ತಾರೆ. ಆದರೆ 735 ಕೋಟಿ ರೂಪಾಯಿಗಳ ಸಾಲದ ಹಣವನ್ನು ಅಲ್ಲಿರತಕ್ಕಂಥ ಸಂಘ ಸಂಸ್ಥೆಗಳವರೇ ರಿಯಿಂಬರ್ಸ್‌ಮೆಂಟ್ ಮಾಡತಕ್ಕಂಥ ಅವಶ್ಯಕತೆಯಿದೆ. ಮಾನ್ಯ ರಾಮದಾಸ್‌ರವರು ಕೇಳಿದ ವಿಚಾರಗಳಿಗೆ ಮಾಹಿತಿಗಳನ್ನು ಒದಗಿಸಿಕೊಡುತ್ತೇನೆ.